ತೀರ್ಮ, ಆದಾದ ನಂತರ ಇವರೇ ಸುಪ್ರೀಂ ಕೋರ್ಟಿಗೆ ಸ್ಟೋನ್ ಕ್ರಷರ್ಸ್ ಅವರು ಒಂದು ಅರ್ಜಿ ಹಾಕಿಕೊಂಡಿದ್ದರು, ಅದು ಕೂಡ ಇವತ್ತು ರಿಜೆಕ್ಟ್ ಆಗಿದೆ, ಈ ಹಿನ್ನಲೆಯಲ್ಲಿ ಬಹಳ ದಿವಸಗಳಿಂದ ಸ್ಟೋನ್ ಕ್ರಷರ್ಸ್ ನೀತಿಯಾಗಬೇಕೆಂದು ಎಲ್ಲರೂ ಕೇಳುತ್ತಿದ್ದರು. ಆ ನೀತಿಯನ್ನು ಸರ್ಕಾರ ರಚಿಸಿ ಅಂತಿಮ ಹಂತದಲ್ಲಿದೆ. ಅದರ ಜೊತೆ ಜೊತೆಗೆ ಮುಂದಿನ ವಾರ ಅಗತ್ಯವಿರುವ ಶಾಸನವನ್ನು ಕೂಡ ಸದನದಲ್ಲಿ ತರಲಿದ್ದೇವೆ. ಶಾಸನಬದ್ಧವಾದ ಒಂದು ರಕ್ಷಣೆಯನ್ನು ಕೊಟ್ಟು ಈ ಸ್ಟೋನ್ ಕ್ರಷರ್ಸ್ ಕೂಡ ನಿಯಮಾನುಸಾರ ಮಾಡಲು ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಇದಕ್ಕೆ ನೀತಿ ಮತ್ತು ಶಾಸನ ಎರಡನ್ನೂ ತರುತ್ತಿದ್ದೇವೆ, ಯಾವ್ಯಾವ ರೀತಿ ಮಾಡಬೇಕೆಂದು ಹೈಕೋರ್ಟಿನ ಏನೊಂದು ಡೈರೆಕ್ಷನ್ ಇದೆ, ಹಲವರ ಜೊತೆ ಚರ್ಚೆ ಮಾಡಿ, ಅಭಯಚಂದ್ರರವರು ಕೂಡ ಇಲ್ಲೇ ಇದ್ದಾರೆ, ಅವರು ಕೂಡ ನನ್ನ ಹತ್ತಿರ ಬಂದು ಅದರ ಬಗ್ಗೆ ಸಾಕಷ್ಟು ಮಾಹಿತಿನ್ನು ಕೊಟ್ಟಿದ್ದಾರೆ, ಸ್ಪಷ್ಟವಾದ ಸ್ಟೋನ್ ಕ್ರಷರ್ಸ್ ಶಾಸನ ಮತ್ತು ನೀತಿಯನ್ನು ಕೂಡ ಸೋಮವಾರ ತರುತ್ತೇವೆ.

8. ಗಮನ ಸೆಳೆಯುವ ಸೂಚನೆ

(1) ವಿಷಯ: ರಾಜ್ಯದಲ್ಲಿ ವಿವಿಧ ರೀತಿಯಲ್ಲಿ ಕ್ರೀಡೆಯಲ್ಲಿ ಅನುಭವ ಹೊಂದಿರುವ ಕ್ರೀಡಾ ಪಟುಗಳು ಸ್ಟೇಡಿಯಂಗಳ ಅಭಾವ ಹಾಗೂ ಇನ್ನಿತರ ಸೌಲಭ್ಯಗಳಿಲ್ಲದೇ ಬೇರೆ ರಾಜ್ಯಗಳಿಗೆ ವಲಸೆ ಹೋಗುತ್ತಿರುವುದರ ಬಗ್ಗೆ

ಶ್ರೀ ಎನ್. ಸಂಪಂಗಿ: ಸನ್ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ವಿವಿಧ ರೀತಿಯ ಕ್ರೀಡೆಗಳಲ್ಲಿ ಅನುಭವಗಳಿಸಿರುವ ಕ್ರೀಡಾಪಟುಗಳಿಗೆ ಹೆಚ್ಚಿನ ಉತ್ತೇಜನ ಇನ್ನೂ ಹೆಚ್ಚಿನ ಅನುಭವಗಳಿಸಲು ಸಾಕಷ್ಟು ಸ್ಟೇಡಿಯಂ ಕೊರತೆ ಹಾಗೂ ಇನ್ನಿತರೆ ಸೌಲಭ್ಯಗಳಿಲ್ಲದೆ ಅನೇಕ ಕ್ರೀಡಾಪಟುಗಳು ಬೇರೆ ಬೇರೆ ರಾಜ್ಯಗಳಿಗೆ ವಲಸೆ ಹೋಗುತ್ತಿದ್ದು, ರಾಜ್ಯದಲ್ಲಿ ನುರಿತ ಕ್ರೀಡಾಪಟುಗಳ ಕೊರತೆ ಇರುವ ಬಗ್ಗೆ ಮತ್ತು ಕೇಂದ್ರ ಸರ್ಕಾರದಿಂದ ಪ್ರತಿ ವರ್ಷ ಸಿಗುತ್ತಿರುವ ಅನುದಾನವನ್ನು ಸಮರ್ಪಕವಾಗಿ ಉಪಯೋಗಿಸಿಕೊಳ್ಳದೆ ರಾಜ್ಯ ಸರ್ಕಾರ ನಿರ್ಲಕ್ಷ ಧೋರಣೆತಾಳಿದ್ದು, ಇದರಿಂದ ಕ್ರೀಡಾಪಟುಗಳಿಗೆ ತೊಂದರೆಯಾಗಿರುವ ಬಗ್ಗೆ ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಹಾಗೂ ಯುವಜನ ಸೇವಾ ಸಚಿವರ ಗಮನ ಸೆಳೆಯಬಯಸುತ್ತೇವೆ.

ಶ್ರೀ ಜಿ. ಜನಾರ್ಧನರೆಡ್ಡಿ (ಪ್ರವಾಸೋದ್ಯಮ, ಮೂಲಭೂತ ಅಭಿವೃದ್ಧಿ ಹಾಗೂ ಯುವ ಜನಸೇವೆ ಸಚಿವರು): ಪ್ರತಿ ವರ್ಷ ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ವಿವಿಧ ಕ್ರೀಡೆಗಳಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದ ಕರ್ನಾಟಕ ಕ್ರೀಡಾಪಟುಗಳನ್ನು ಗುರುತಿಸಿ ಪ್ರತಿ ವರ್ಷ ಏಕಲವ್ಯ ಪ್ರಶಸ್ತಿ ನೀಡಿ ಸನ್ಮಾನಿಸಲಾಗುತ್ತಿದೆ. ಈ ಪ್ರಶಸ್ತಿಯು ನಗದು ರೂ. 1.00 ಲಕ್ಷ, ಕಂಚಿನ ಪ್ರತಿಮೆ, ಸಮವಸತ್ರ ಒಳಗೊಂಡಿರುತ್ತದೆ. ಪ್ರತಿಭಾವಂತ ಕ್ರೀಡಾಪಟುಗಳಿಗೆ ವಿವಿಧ ಕ್ರೀಡೆಗಳಲ್ಲಿ ಪ್ರೋತ್ಸಾಹಿಸುವ ದೃಷ್ಟಿಯಿಂದ ರಾಷ್ಟ್ರ ಮತ್ತು ಅಂತರ ರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಿ ಚಿನ್ನ, ಬೆಳ್ಳಿ ಹಾಗೂ ಕಂಚಿನ ಪದಕ ಪಡೆದ ವಿದ್ಯಾರ್ಥಿಗಳಿಗೆ ವೈದ್ಯಕೀಯ ಹಾಗೂ ತಾಂತ್ರಿಕ ಶಿಕ್ಷಣ ಕೋರ್ಸುಗಳಿಗೆ ಕ್ರೀಡಾ ಕೋಟಾದಡಿಯಲ್ಲಿ ಸೀಟುಗಳನ್ನು ಕಾಯ್ದಿರಿಸಿ ಉನ್ನತ ಶಿಕ್ಷಣ ಪಡೆಯಲು ಉತ್ತೇಜಿಸಲಾಗುತ್ತಿದೆ.

ಮಾನ್ಯ ಮುಖ್ಯಮಂತ್ರಿಗಳು ತಮ್ಮ 2009–10ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಿಸಿರುವಂತೆ ಅಂತರ ರಾಷ್ಟ್ರೀಯ ಮತ್ತು ರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಿ ಪದಕ ವಿಜೇತರಾದ ರಾಜ್ಯದ ಕ್ರೀಡಾಪಟುಗಳಿಗೆ ರೂ. 1,00,000 ಲಕ್ಷ, ರೂ. 50,000, ರೂ. 25,000 ನಗದು ಬಹುಮಾನ ನೀಡಿ ಪದಕ ವಿಜೇತರಾದ 56 ಕರ್ನಾಟಕದ ಕ್ರೀಡಾಪಟುಗಳನ್ನು ಗೌರವಿಸಲಾಗಿದೆ.

ಕರ್ನಾಟಕ ಕ್ರೀಡಾ ಪ್ರಾಧಿಕಾರದಿಂದ ಮಾನ್ಯತೆ ಪಡೆದ ರಾಜ್ಯದ ಕ್ರೀಡಾ ಸಂಸ್ಥೆಗಳು ಕರ್ನಾಟಕ ರಾಜ್ಯದ ತಂಡವನ್ನು ರಾಷ್ಟ್ರೀಯ ಪಂದ್ಯಗಳಲ್ಲಿ ಭಾಗವಹಿಸಲು ಕಳುಹಿಸಿಕೊಡುವ ಸಂಬಂಧ ಈ ಕ್ರೀಡಾಪಟುಗಳ ಪ್ರಯಾಣ ಭತ್ಯೆ, ದಿನಭತ್ಯೆ, ಕ್ರೀಡಾ ಗಂಟು, ಪ್ರವೇಶ ಶುಲ್ಕ, ವೈದ್ಯಕೀಯ ಹಾಗೂ ಇತರೆ ವೆಚ್ಚಗಳನ್ನು ಪ್ರಾಧಿಕಾರದಿಂದ ಭರಿಸಿ ನಿಯೋಜಿಸಲಾಗಿದೆ.

ಅಂತರ ರಾಷ್ಟ್ರೀಯ ಮಟ್ಟದ ಕ್ರೀಡೆಗಳಲ್ಲಿ ಭಾಗವಹಿಸಿದ ಕರ್ನಾಟಕದ ಕ್ರೀಡಾಪಟುಗಳಿಗೆ ವಿಮಾನಯಾನ/ಇತರೆ ವೆಚ್ಚವನ್ನು ಕರ್ನಾಟಕ ಕ್ರೀಡಾ ಪ್ರಾಧಿಕಾರದ ಅನುದಾನದಿಂದ ನೀಡಲಾಗುತ್ತಿದೆ.

ದಿನಾಂಕ 5–1–2011ರಂದು ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ 19ನೇ ಕಾಮನ್ ವೆಲ್ತ್ ಕ್ರೀಡಾಕೂಟ, 16ನೇ ಏಷ್ಯನ್ ಕ್ರೀಡಾಕೂಟದಲ್ಲಿ ವಿಜೇತರಾದ ಕರ್ನಾಟಕದ ಕ್ರೀಡಾಪಟುಗಳಿಗೆ ಪ್ರತಿ ಚಿನ್ನದ ಪದಕಕ್ಕೆ ತಲಾ

ರೂ. 10.00 ಲಕ್ಷ ಮತ್ತು ಪ್ರತಿ ಬೆಳ್ಳಿ ಪದಕಕ್ಕೆ ತಲಾ ರೂ. 7.00 ಲಕ್ಷ ಹಾಗೂ ಪರತಿ ಕಂಚಿನ ಪದಕ ಪಡೆದ ಕ್ರೀಡಾಪಟುಗಳಿಗೆ ತಲಾ ರೂ. 5.00 ಲಕ್ಷ ನಗದು ಪುರಸ್ಕಾರವನ್ನು ನೀಡಿ ಗೌರವಿಸಲಾಗಿದೆ.

ಹಾಗೆಯೇ 3ನೇ ಕಾಮನ್ ವೆಲ್ತ್ ಯುವ ಕ್ರೀಡಾಕೂಟದಲ್ಲಿ ಭಾಗವಹಿಸಿ ಪದಕಗಳಿಸಿದ ಕರ್ನಾಟಕದ ಕ್ರೀಡಾಪಟುಗಳಿಗೆ ಚಿನ್ನದ ಪದಕಕ್ಕೆ ರೂ. 2.50 ಲಕ್ಷ, ಬೆಳ್ಳಿ ಪದಕಕ್ಕೆ ರೂ. 1.50 ಲಕ್ಷ ಹಾಗೂ ಕಂಚಿನ ಪದಕಕ್ಕೆ ರೂ. 1.25 ಲಕ್ಷದಂತೆ ನಗದು ಪುರಸ್ಕಾರ ನೀಡಲಾಗಿದೆ.

50 ವರ್ಷಗಳ ಮೇಲ್ಪಟ್ಟ ಕಷ್ಟ ಪರಿಸ್ಥಿತಿಯಲ್ಲಿರುವ ಕುಸ್ತಿ ಕ್ರೀಡಾಪಟುಗಳಿಗೆ ಈ ಕೆಳಕಂಡಂತೆ ಮಾಸಾಶನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.
ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿದ ಕುಸ್ತಿ/ಕ್ರೀಡಾಪಟುಗಳಿಗೆ ಮಾಸಾಶನ ರೂ. 1500/–
ರಾಷ್ಟ್ರೀಯ ಮಟ್ಟದಲ್ಲಿ ಭಾಗವಹಿಸಿದ ಕುಸ್ತಿ/ಕ್ರೀಡಾಪಟುಗಳಿಗೆ ಮಾಸಾಶನ ರೂ. 1000/–
ರಾಜ್ಯ ಮಟ್ಟದಲ್ಲಿ ಭಾಗವಹಿಸಿದ ಕುಸ್ತಿ/ಕ್ರೀಡಾಪಟುಗಳಿಗೆ ಮಾಸಾಶನ ರೂ. 750/–

ರಾಜ್ಯದ ಕ್ರೀಡಾಪಟುಗಳು ರಾಷ್ಟ್ರೀಯ ಮತ್ತ ಅಂತರ್ ರಾಷ್ಟ್ರೀಯ ಸ್ಪರ್ಧೆಗಳಲ್ಲಿ ಉತ್ತಮ ಪ್ರದರ್ಶನ ನೀಡಲು ಅಗತ್ಯ ತರಬೇತಿ ಪಡೆಯಲು ಕೊಪ್ಪಳ ಮತ್ತು ಚಾಮರಾಜನಗರ ಜಿಲ್ಲಾ ಕೇಂದ್ರಗಳನ್ನು ಹೊರತುಪಡಿಸಿ ಇತರ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲೂ ಸುಸಜ್ಜಿತವಾದ ಕ್ರೀಡಾಂಗಣಗಳನ್ನು ಈಗಾಗಲೇ ಇಲಾಖೆಯ ವತಿಯಿಂದ ನಿರ್ಮಿಸಲಾಗಿದೆ. ಹಾಗೆಯೇ ಯಾದಗಿರ್, ಚಿಕ್ಕಬಳ್ಳಾಪುರ, ರಾಮನಗರಗಳಲಿರುವ ಕ್ರೀಡಾಂಗಣಗಳನ್ನು ಉನ್ನತೀಕರಿಸಲು ಕ್ರಮಕ್ಕೆಗೊಳ್ಳಲಾಗುತ್ತಿದೆ. ಹಾಗೆಯೇ ಬೆಂಗಳೂರಿನ ಕಂಠೀರವ ಕ್ರೀಡಾಂಗಣ, ಚಿತ್ರದುರ್ಗ ಕ್ರೀಡಾಂಗಣಗಳಲ್ಲಿ ಅಥ್ಲೆಟಿಕ್ ಸಿಂಥೆಟಿಕ್ ಟ್ರ್ಯಾಕ್ ಅಳವಡಿಸಲಾಗಿದೆ. ಮತ್ತು ಗದಗ್ ಮತ್ತು ಬೆಳಗಾಂ ಕ್ರೀಡಾಂಗಣಗಳಲ್ಲಿ ಸಿಂಥೆಟಿಕ್ ಟ್ರ್ಯಾಕ್ ಅಳವಡಿಕೆಯ ಕಾರ್ಯ ಪ್ರಗತಿಯಲ್ಲಿದೆ. ಒಟ್ಟು 30 ಕ್ರೀಡಾ ಶಾಲೆ ಮತ್ತು ಕ್ರೀಡಾ ನಿಲಯಗಳನ್ನು ಸ್ಥಾಪಿಸಲಾಗಿದೆ. ಇದರಿಂದಾಗಿ ರಾಜ್ಯದ ಪ್ರತಿಭಾನ್ವಿತ ಕ್ರೀಡಾ ಮಕ್ಕಳಿಗೆ ಸರ್ಕಾರದಿಂದ ನುರಿತ ತರಬೇತುದಾರರಿಂದ ವಿವಿಧ ಕ್ರೀಡೆಗಳಲ್ಲಿ ತರಬೇತಿ ನೀಡಲಾಗುತ್ತಿದೆ. ಇತ್ತೀಚಿನ ವಿಷ್ಯನ್ ಕ್ರೀಡೆಗಳಲ್ಲಿ ಮತ್ತು ಕಾಮನ್

ವೆಲ್ತ್ ಕ್ರೀಡೆಗಳಲ್ಲಿ ಸರ್ಕಾರದ ಕ್ರೀಡಾ ಶಾಲೆಗಳಿಂದ ಹೊರಹೊಮ್ಮಿದ 6 ಜನ ಕ್ರೀಡಾಪಟುಗಳು ಪದಕ ವಿಜೇತರಾಗಿರುವುದು ಸರ್ಕಾರದ ಪ್ರಯತ್ನಗಳ ಯಶಸ್ವಿಗೆ ಕನ್ನಡಿಯಾಗಿದೆ.

12ನೇ ಹಣಕಾಸಿನ ಆಯೋಗದ ಯೋಜನೆಯಡಿ 2006–07 ರಿಂದ 2009–10ರವರೆಗೆ ಕೇಂದ್ರ ಸರ್ಕಾರದಿಂದ ವಾರ್ಷಿಕವಾಗಿ ತಲಾ ರೂ. 25.00 ಕೋಟಿಯಂತೆ ಒಟ್ಟು ರೂ. 100.00 ಕೋಟಿ ಅನುದಾನವು ಬಿಡುಗಡೆಯಾಗಿದ್ದು, ಈ ಅನುದಾನದಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಕ್ರೀಡಾಂಗಣಗಳ ನಿರ್ಮಾಣ ಮತ್ತು ಒಳಾಂಗಣ ಕ್ರೀಡಾಂಗಣ ಈಜುಕೋಳ ನಿರ್ಮಾಣ, ಸಿಂಥಟಿಕ್ ಟ್ರ್ಯಾಕ್ ಅಳವಡಿಕೆ ಮುಂತಾದ ಮೂಲಭೂತ ಸೌಕರ್ಯಗಳಿಗಾಗಿ ಒಟ್ಟು ರೂ.99.95 ಕೋಟಿ ವೆಚ್ಚ ಮಾಡಲಾಗಿದೆ.

ಕೇಂದ್ರ ಸರ್ಕಾರದ ಪಂಚಾಯತ್ ಯುವ ಕ್ರೀಡಾ ಔರ್ ಖೇಲ್ ಅಭಿಯಾನ್ ಅಡಿ 2008–09ನೇ ಸಾಲಿನಲ್ಲಿ ಒಂದು ಬಾರಿ ಬಂಡವಾಳ ಅನುದಾನ ಅಡಿಯಲ್ಲಿ ಕ್ರೀಡಾ ಮೂಲಭೂತ ಸೌಕರ್ಯಗಳನ್ನು ನಿರ್ಮಿಸಲು ಕೇಂದ್ರ ಸರ್ಕಾರವು ರೂ. 490.50 ಲಕ್ಷ ಮತ್ತು ರಾಜ್ಯ ಸರ್ಕಾರದ ಪಾಲು ರೂ. 81.87 ಲಕ್ಷ ಅನುದಾನವನ್ನು ನೀಡಲಾಗಿದೆ.

2009–10ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಪಂಚಾಯತ್ ಯುವ ಕ್ರೀಡಾ ಔರ್ ಖೇಲ್ ಅಬಿಯಾನ್ ಅಡಿ ಒಂದು ಬಾರಿ ಬಂಡವಾಳ ಅನುದಾನ ಅಡಿಯಲ್ಲಿ ಕ್ರೀಡಾ ಮೂಲಭೂತ ಸೌಕರ್ಯಗಳನ್ನು ನಿರ್ಮಿಸಲು ಕೇಂದ್ರ ಸರ್ಕಾರವು ರೂ. 490.50 ಲಕ್ಷ ಮತ್ತು ರಾಜ್ಯ ಸರ್ಕಾರದ ಪಾಲು ರೂ.30.75 ಲಕ್ಷ ಅನುದಾನವನ್ನು ನೀಡಲಾಗಿದೆ.

2008–09ನೇ ಸಾಲಿನಲ್ಲಿ ಅರ್ಜುನಾ ಹಾಗೂ ಕಾರ್ಯಾಚರಣೆ ಅನುದಾನವಾಗಿ ಪೈಕಾ ಕೇಂದ್ರಕ್ಕೆ ಕ್ರೀಡಾ ಸಾಮಾಗ್ರಿಗಳನ್ನು ಕೊಳ್ಳಲು ಹಾಗೂ ಪೈಕಾ ಕೇಂದ್ರದ ನಿರ್ವಹಣೆಗಾಗಿ ಕೇಂದ್ರ ಸರ್ಕಾರವು ಶೇಕಡ 100ರಷ್ಟು ರೂ. 132.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

2009–10ನೇ ಸಾಲಿನಲ್ಲಿ ಪೈಕಾ ಕೇಂದ್ರಕ್ಕೆ ಕ್ರೀಡಾ ಸಾಮಾಗ್ರಿಗಳನ್ನು ಕೊಳ್ಳಲು ಹಾಗೂ ಪೈಕಾ ಕೇಂದ್ರದ ನಿರ್ವಹಣೆಗಾಗಿ ಕೇಂದ್ರ ಸರ್ಕಾರವು ಶೇಕಡ 100ರಷ್ಟು ಅಂದರೆ ರೂ. 132.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಿದ್ದು, ಬಳಸಲಾಗಿದೆ.

ಮೇಲ್ಕಂಡ ಎಲ್ಲಾ ಹಿನ್ನಲೆಯಲ್ಲಿ ಸರ್ಕಾರವು ರಾಜ್ಯದ ಎಲ್ಲಾ ಕ್ರೀಡಾಪಟುಗಳಿಗೆ ಅಗತ್ಯವಿರುವ ಮೂಲಭೂತ ಸೌಲಭ್ಯ ಹಾಗೂ ಹೆಚ್ಚುವರಿ ಉತ್ತೇಜನವನ್ನು ನೀಡುತ್ತಿದೆ. ಆದ್ದರಿಂದ, ರಾಜ್ಯದ ಪ್ರತಿಭಾನ್ವಿತ ಕ್ರೀಡಾಪಟುಗಳು ಕೇಂದ್ರ ಸರ್ಕಾರದ ಸಂಸ್ಥೆಗಳು ಹಾಗೂ ಇತರ ರಾಜ್ಯಗಳಿಗೆ ಉದ್ಯೋಗ ದೊರಕಿರುವ ಕಾರಣದಿಂದ ಬೇರೆ ರಾಜ್ಯಗಳಿಗೆ/ಸ್ಥಳಗಳಿಗೆ ಹೋಗಿರಬಹುದೇ ಹೊರತು ಸೌಲಭ್ಯಗಳ ಅಥವಾ ಉತ್ತೇಜನೆಯ ಕೊರತೆಯಿಂದಾಗಿ ಯಾವುದೇ ಕ್ರೀಡಾಪಟುಗಳು ವಲಸೆ ಹೋದ ಪ್ರಕರಣ ವರದಿಯಾಗಿರುವುದಿಲ್ಲ.

ಶ್ರೀ ಎನ್. ಸಂಪಂಗಿ: ನಾವು ಎಲ್ಲವನ್ನೂ ಕೂಡ ಚರ್ಚೆ ಮಾಡುತ್ತೇವೆ, ಈ ಯುವಕರ ವಿಚಾರವನ್ನು ಬಿಟ್ಟು ಹೋಗುತ್ತೇವೆ. ಇವತ್ತು ನಮ್ಮ ರಾಜ್ಯದಲ್ಲಿ ಏನಾಗಿದೆ ಎಂದರೆ, ಕ್ರೀಡಾಪಟುಗಳಿಗಾಗಲಿ ಅಥವಾ ನಮ್ಮ ತಾಲ್ಲೂಕುಗಳ ಗ್ರಾಮಾಂತರ ಕ್ರೀಡೆಗಳಿಗೆ ಯಾವುದಕ್ಕೂ ಕೂಡ ಇವತ್ತು ಪ್ರೋತ್ಸಾಹವಿಲ್ಲ. ಇವತ್ತು ಮುಖ್ಯವಾಗಿ ಆ ಯೂತ್ ಸರ್ವಿಸ್ ಇಲಾಖೆಯ ಕೈಬಿಟ್ಟು ಹೋಗಿದೆಯೇನೋ ಎನ್ನುವ ಭಾವನೆ ಇತ್ತು. ಆದರೆ ತಾವು ಈ ಯೂತ್ ಸರ್ವೀಸ್ ಮಂತ್ರಿಗಳಾದ ಮೇಲೆ ಇದು ಇನ್ನು ಮುಂದೆ ಸ್ವಲ್ಪ ಹೆಜ್ಜೆ ಇಡುತ್ತದೆ ಎಂದು ನನಗನಿಸುತ್ತದೆ. ಇವತ್ತು ಏನಾಗಿದೆ ಎಂದರೆ, ಕರ್ನಾಟಕದಲ್ಲಿ ಈ ಕ್ರೀಡಾ ಪಟುಗಳಿಗೆ ಯಾವುದೇ ರೀತಿಯ ರಕ್ಷಣೆ ಇಲ್ಲ. ಇವತ್ತು ನಮ್ಮ ರಾಷ್ಟ್ರಮಟ್ಟದಲ್ಲಾಗಲಿ ಅಂತರರಾಷ್ಟ್ರೀಯ ಮಟ್ಟದಲ್ಲಾಗಲಿ ಕ್ರೀಡಾಪಟುಗಳಿಗೆ ಪ್ರೋತ್ಸಾಹವಾಗಿ ಏನೂ ಕೊಡುತ್ತಿಲ್ಲ. ಈಗ ತಾವು ಕೊಟ್ಟಿರುವ ಉತ್ತರಕ್ಕೆ ಬಹಳ ಸಂತೋಷ, ರಾಷ್ಟ್ರ ಮತ್ತು ಅಂತರರಾಷ್ಟ್ರ ಮಟ್ಟದಲ್ಲಿ ಕ್ರೀಡಾಪಟುಗಳಿಗೆ ಈ ಒಂದು ಪ್ರಶಸ್ತಿಗಳು ಮತ್ತು ಕಾಣಿಕೆಗಳನ್ನು ಕೊಟ್ಟಿದ್ದೀರಿ, ಅದೇನಾದರೂ ಅವರಿಗೆ ನಿಜವಾಗಲೂ ಸೇರಿದರೆ ಬಹಳ ಸಂತೋಷ. ಏಕೆಂದರೆ, ನಮ್ಮಲ್ಲಿ ಅನೇಕ ರಾಷ್ಟ್ರ ಮತ್ತು ಅಂತರರಾಷ್ಟ್ರ ಮಟ್ಟದ ಕ್ರೀಡಾಪಟುಗಳು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ.

ಅಧ್ಯಕ್ಷರು: ಕ್ಲಾರಿಫಿಕೇಷನ್ ಇದ್ದರೆ ಕೇಳಿ, ನೀವು ಕೇಳುತ್ತಿರುವುದು ಕ್ಲಾರಿಫಿಕೇಷನ್ ಆಗುವುದಿಲ್ಲ, ಅವರು ಕೊಟ್ಟ ಉತ್ತರದ ಬಗ್ಗೆ ಕ್ಲಾರಿಫಿಕೇಷನ್ ಕೇಳಬೇಕು, ಗಮನ ಸೆಳೆಯುವ ಸೂಚನೆಯಲ್ಲಿ ಆ ತರಹವಿಲ್ಲ.

ಶ್ರೀ ಎನ್. ಸಂಪಂಗಿ: ಅಧ್ಯಕ್ಷರೆ, ಮಾನ್ಯ ಮಂತ್ರಿಗಳ ಗಮನಕ್ಕೆ ಹೋಗುತ್ತಿದೆ, ಇವತ್ತು ಕ್ರೀಡಾಪಟುಗಳು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ,

ಕೆಲವರು ಹೊರ ರಾಜ್ಯಗಳಿಗೆ ಹೋಗುತ್ತಿದ್ದಾರೆ, ಮುಖ್ಯಮಂತ್ರಿಗಳು ಒಂದು ಮಾತನ್ನು ಹೇಳಿದರು.

ಅಧ್ಯಕ್ಷರು: ಇದು ಕ್ಲಾರಿಫಿಕೇಷನ್ ಅಲ್ಲ, ಕಾಲಿಂಗ್ ಅಟೆಂಷನ್‌ನಲ್ಲಿ ನೀವು ಈ ರೀತಿ ಹೇಳುವುದಕ್ಕೆ ಬರುವುದಿಲ್ಲ.

ಶ್ರೀ ಎನ್. ಸಂಪಂಗಿ: ಇನ್ನು ಯಾವ ರೀತಿ ಗಮನ ಸೆಳೆಯುವುದು?

ಅಧ್ಯಕ್ಷರು: ರೂಲ್ಸ್ ತೆಗೆದು ನೋಡಿ, You are an Advocate, you please read the rules.

ಶ್ರೀ ಎನ್. ಸಂಪಂಗಿ: ಅಧ್ಯಕ್ಷರೆ, ಇವತ್ತು ಇರುವ ಕ್ರೀಡಾಪಟುಗಳ ಬಗ್ಗೆ ಬಹಳ ಮಾತನಾಡುತ್ತೀರಿ, ಅವರ ಬಗ್ಗೆ ಇಲ್ಲಿ ಅರ್ಧಗಂಟೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲ.

ಅಧ್ಯಕ್ಷರು: ಚರ್ಚೆ ಮಾಡುವುದು ಬೇರೆ, ಗಮನ ಸೆಳೆದಿದ್ದಿರಿ, ಉತ್ತರ ಕೊಟ್ಟಿದ್ದಾರೆ.

ಶ್ರೀ ಎನ್. ಸಂಪಂಗಿ: ಕಾರಣವಿಲ್ಲದ್ದಕ್ಕೆಲ್ಲಾ ಅರ್ಧರ್ಧ ಗಂಟೆ ಚರ್ಚೆ ಮಾಡುತ್ತೀರಿ, ಕ್ರೀಡಾಪಟುಗಳ ಬಗ್ಗೆ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ?

ಅಧ್ಯಕ್ಷರೆ: ಇದು ಚರ್ಚೆಯಲ್ಲವಲ್ಲಾ? ನೀವು ಚರ್ಚೆ ಮಾಡಿ.

ಶ್ರೀ ಎನ್. ಸಂಪಂಗಿ: ಚರ್ಚೆ ಮಾಡುತ್ತಿರುವುದು.

ಅಧ್ಯಕ್ಷರು: ಚರ್ಚೆ ಮಾಡುವುದಕ್ಕೆ ನಿಯಮದಲ್ಲಿ ತನ್ನಿ.

ಶ್ರೀ ಎನ್. ಸಂಪಂಗಿ: ಗಮನ ಸೆಳೆಯುವುದೆಂದರೆ ಇನ್ಯಾವ ತರಹ?

ಅಧ್ಯಕ್ಷರು: You are an advocate ರೂಲ್ಸ್ ತೆಗೆದು ನೋಡಿ, ಕ್ಲಾರಿಫಿಕೇಚನ್ ಕೇಳಿ.

ಶ್ರೀ ಎನ್. ಸಂಪಂಗಿ: ಆಯಿತು, ಕರ್ನಾಟಕದಲ್ಲಿ ಸುಮಾರು 175 ತಾಲ್ಲೂಕುಗಳಲ್ಲಿ ಕ್ರೀಡಾಂಗಣಗಳನ್ನು ಪ್ರಾರಂಭ ಮಾಡಿದ್ದೀರಿ, ಆದರೆ ಇವತ್ತು ಯಾವುದೂ ಕೂಡ ಪೂರ್ತಿಯಾಗಿಲ್ಲ, ಅವನ್ನು ಯಾವತ್ತು ಪೂರ್ತಿ ಮಾಡಿಕೊಡುತ್ತೀರಿ, ರಾಷ್ಟ್ರ ಮತ್ತು ಅಂತರರಾಷ್ಟ್ರ ಮಟ್ಟದಲ್ಲಿ ಪ್ರಶಸ್ತಿ ಪಡೆದಂಥ ನಮ್ಮ ಕ್ರೀಡಾಪಟುಗಳಿಗೆ ನಿವೇಶನಗಳೇ ಇಲ್ಲ, ನಿವೇಶನಗಳನ್ನು ಕೊಡುವುದಕ್ಕೆ ತಾವು ಏನು ಮಾಡುತ್ತೀರಿ ಮತ್ತು ನಮ್ಮ ಕ್ರೀಡಾಪಟುಗಳಿಗೆ ಹಣಕಾಸಿನ

ವಿಚಾರದಲ್ಲಿ ಯಾವ ರೀತಿ ಸಹಾಯ ಮಾಡಿ ಅವರ ಜೀವನಕ್ಕೆ ಆಧಾರವಾಗುತ್ತೀರೆಂಬುದನ್ನು ಮಂತ್ರಿಗಳು ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ಜಿ. ಜನಾರ್ಧನ ರೆಡ್ಡಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಸಂಪಂಗಿಯವರು ಹೇಳಿದ ಪ್ರಕಾರ ಈಗಾಗಲೇ 134 ತಾಲ್ಲೂಕುಗಳಲ್ಲಿ ಸ್ಟೇಡಿಯಂ ನಿರ್ಮಾಣವಾಗಿದೆ, ಉಳಿದ ಭಾಗಗಳಲ್ಲಿ ಜಾಗದ ಕೊರತೆಯಿಂದ ಕಟ್ಟುವುದಕ್ಕೆ ತೊಂದರೆಯಾಗಿದೆ ಎಂಬುದು ಬಹಳ ಮುಖ್ಯವಾದ ವಿಷಯ. ಆದರೆ ಅದನ್ನು ಬಗೆಹರಿಸಿ, ಇವತ್ತು ಒಂದು ಉದಾಹರಣೆಯಾಗಿ ಹೇಳುವುದಾದರೆ, ಕೆಲವೊಂದು ಜಿಲ್ಲೆಗಳಲ್ಲಿ ಆ ಜಾಗದ ಸಮಸ್ಯೆ ಇದ್ದಾಗ ಇವತ್ತೇ ಬಗೆಹರಿದಿದೆ. ತಾವು, ನಾನು ಉತ್ತರ ಕೊಟ್ಟಿರುವ ಪ್ರಕಾರ ಅದು ನಿಜವೇ ಆದರೂ ಬಹಳ ಸಂತೋಷವಾಗುತ್ತದೆಂದು ಒಂದು ಮಾತನ್ನು ಹೇಳಿದಿರಿ. ಅದು ನಿಜವೇ ಎನ್ನುವುದಕ್ಕೆ ನಮ್ಮ ಬ್ಯಾಂಕ್ವಿಟ್ ಹಾಲಿನಲ್ಲಿ ನಾನು ಮಂತ್ರಿಯಾದ ಕೂಡಲೇ ಸನ್ಮಾನ್ಯ ಮುಖ್ಯಮಂತ್ರಿಳ ಜೊತೆಯಲ್ಲಿ ಮಾತನಾಡಿ 5ನೇ ತಾರೀಖಿ ಜನವರಿಯಲ್ಲೇ ಒಂದು ಕಾರ್ಯಕ್ರಮವನ್ನು ಏರ್ಪಾಡು ಮಾಡಿ ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕ ಬಂದಿರುವವರಿಗೆ ಹತ್ತು ಲಕ್ಷ, ಏಳು ಲಕ್ಷ, ಐದು ಲಕ್ಷಗಳ ಚೆಕ್ಕನ್ನು ಈ ರೀತಿ ಅವರ ಕೈಯಲ್ಲೇ ಮಾದ್ಯಮದವರ ಸ್ನೇಹಿತರ ಮುಂದೆಯೇ ಕೊಟ್ಟು ಬಹಳ ಅದ್ಭುತವಾದ ಕಾರ್ಯಕ್ರಮವನ್ನು ಮಾಡಲಾಗಿದೆ. ಜೊತೆಗೆ ಇವತ್ತು ಉತ್ತರದಲ್ಲಿ ನಿಮಗೇನು ಕೊಡಲಾದಿಗೆ ಎಲ್ಲಾ ಫ್ಯಾಕ್ಟ್ಸ್. ಯಾವುದೇ ರೀತಿಯಲ್ಲಿ ನಮ್ಮ ಕರ್ನಾಟಕ ರಾಜ್ಯದಿಂದ ಹೊರ ರಾಜ್ಯಗಳಿಗೆ ಕ್ರೀಡಾಪಟುಗಳು ಹೋಗಿದ್ದಾರೆಂದರೆ, ಇವತ್ತು ಬ್ಯಾಂಕಿಂಗ್, ರೈಲ್ವೆ ಇಲಾಖೆ ಕೆಲಸವಾಗಿರಬಹುದು, ಬೇರೆ ಬೇರೆ ಕೆಲಸ ಮೂಲಕ ಹೋಗಿರುವವರು. ಆದರೆ ಅವರು ಕ್ರೀಡೆ ವಿಷಯ ಬಂದಾಗ ಅವರು ನಮ್ಮ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸುತ್ತಿದ್ದಾರೆ, ತೊಂದರೆ ಏನು ಇಲ್ಲ. ನೀವೆಲ್ಲಾ ನನ್ನ ಮೇಲೆ ವಿಶ್ವಾಸವನ್ನಿಟ್ಟಿದ್ದೀರಿ, ನಾನು ಕ್ರೀಡಾ ಸಚಿವನಾದ ಮೇಲೆ ಇದಕ್ಕೆ ಒಂದು ಹೊಸ ರೂಪ ತೆಗೆದುಕೊಂಡು ಬರುತ್ತೇನೆ ಎನ್ನುವ ನಂಬಿಕೆಯನ್ನು ನನ್ನ ಮೇಲೆ ಇಟ್ಟಿದ್ದೀರಿ, ಖಂಡಿತವಾಗಿಯೂ ಯಾವುದೇ ಕಾರಣಕ್ಕೂ ಬರುವ ದಿವಸಗಳಲ್ಲಿ, ಯಾವ ರೀತಿ ಪ್ರವಾಸೋದ್ಯಮ ಇಲಾಖೆಯನ್ನು ಬೆಳಕಿಗೆ ತಂದಿದ್ದೇವೆಯೋ ಅದೇ ರೀತಿಯಲ್ಲಿ ಯುವಜನಸೇವಾ ಇಲಾಖೆಯಲ್ಲಿ ಅಂಥ ದೊಡ್ಡ ಪ್ರಮಾಣದ ಬೆಳಕನ್ನು ತರುತ್ತೇವೆಂದು ಈ ಸಂದರ್ಭದಲ್ಲಿ ನಮ್ಮ ಮೇಲೆ ಭರವಸೆನ್ನಿಟ್ಟುಕೊಳ್ಳುವುದು.

ಶ್ರೀ ಎನ್. ಸಂಪಂಗಿ: ಒಂದು ಕ್ಲಾರಿಫಿಕೇಷನ್,

ಅಧ್ಯಕ್ಷರು: ನಾನು ನಿಮ್ಮ ಗಮನಕ್ಕೆ ರೂಲ್ಸ್ ಅನ್ನು ಓದಿ ಬಿಡುತ್ತೇನೆ.

ಶ್ರೀ ಎನ್. ಸಂಪಂಗಿ: ಅಧ್ಯಕ್ಷರೆ, ಆಯಿತು, ಕ್ರೀಡಾಪಟುಗಳ ಬಗ್ಗೆ ತಮಗೆ ಎಷ್ಟು ಕಾಳಜಿ ಇದೆ ಎಂಬುದು ಗೊತ್ತಾಗುತ್ತದೆ ಬಿಡಿ.

ಅಧ್ಯಕ್ಷರು: ಈ ತರಹ ನೀವು ಹೇಳುವುದಾದರೆ, ಈ ರೂಲ್ಸ್ ಅನ್ನು ತೆಗೆದು ಹಾಕಿ, you being and Advocate ಇದು ಏನು ಹೇಳುತ್ತದೆಂದು ಸ್ವಲ್ಪ ಓದಿ, ಬೇರೆಯವರಾಗಿದ್ದರೆ ನಾನು ಒಪ್ಪುತ್ತಿದೆ, ತಾವು ಒಬ್ಬ ವಕೀಲರಾಗಿ ಈ ರೀತಿ ಮಾತನಾಡಬಾರದು, it is too bad.

2. ವಿಷಯ: ಹೇಮಾವತಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಶ್ರೀರಾಮ ದೇವರ ಅಣೆಕಟ್ಟೆ ನಾಲೆಯ ಕಳಪೆ ಕಾಮಗಾರಿಯ ಬಗ್ಗೆ

ಶ್ರೀ ಟಿ.ಬಿ. ಜಯಚಂದ್ರ (ಸಿರಾ): ಸನ್ಮಾನ್ಯ ಅಧ್ಯಕ್ಷರೆ, ಹೇಮಾವತಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಶ್ರೀರಾಮ ದೇವರ ಅಣೆಕಟ್ಟೆ ನಾಲೆಯ ಕಳಪೆ ಕಾಮಗಾರಿ ಹಾಗೂ ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳ ಬಗ್ಗೆ ಮಾನ್ಯ ಜಲಸಂಪನ್ಮೂಲ ಸಚಿವರ ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು): ಹೇಮಾವತಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಶ್ರೀರಾಮದೇವರ ಅಣೆಕಟ್ಟೆ ನಾಲೆಯು 136 ವರ್ಷಗಳ ಹಿಂದೆ ನಿರ್ಮಿಸಿದ್ದ ನಾಲೆಯಾಗಿದ್ದು, ಇದು ಹೊಳೆನರಸೀಪುರ ತಾಲ್ಲೂಕು ಕಟ್ಟೇಬೆಳಗುಲಿ ಗ್ರಾಮದ ಹತ್ತಿರ ಇರುತ್ತದೆ. ಈ ಅಣೆಕಟ್ಟೆಯಿಂದ 2 ನಾಲೆಗಳು ಹೊರಡುತ್ತಿದ್ದು, ಉತ್ತರ ನಾಳೆ 108 ಕಿ.ಮೀ. ಉದ್ದವಿದ್ದು, ಇದರಿಂದ 3830 ಹೆ. ಮತ್ತು ದಕ್ಷಿಣ ನಾಲೆ 44 ಕಿ.ಮೀ. ಉದ್ದವಿದ್ದು, ಇದರ ವ್ಯಾಪ್ತಿಯು 892 ಹೆ. ಅಂದರೆ ಒಟ್ಟು 4722 ಹೆ. ಪ್ರದೇಶಕ್ಕೆ ನೀರು ಒದಗಿಸಲು ಯೋಜಿಸಿದ ಅಣೆಕಟ್ಟೆ ನಾಲೆಯಾಗಿರುತ್ತದೆ.

ಈ ನಾಲೆಗಳು ಹಳೆಯ ಲೈನಿಂಗ್ ರಹಿತ ನಾಲೆಯಾದ ಕಾರಣ ತಮ್ಮ ಮೂಲ ಸ್ವರೂಪವನ್ನು ಕಳೆದುಕೊಂಡಿದ್ದು, ಇದರಿಂದ ನಾಲೆಗಳಲ್ಲಿ ಹರಿಯುವ ನೀರಿನ ವೇಗ ಕಡಿಮೆಯಾಗಿ ಸರಿಯಾದ ಸಮಯಕ್ಕೆ ಅಂತಿಮ ಭಾಗದ ಅಚ್ಚುಕಟ್ಟಿಗೆ ಅಗತ್ಯ ನೀರು ಸರಬರಾಜ ಆಗದ ಕಾರಣ ಸುಮಾರು 947 ಹೆ. ಬಾಧಿತ ಅಚ್ಚುಕಟ್ಟು ಪ್ರದೇಶವಾಗಿತ್ತು. ಈ ಕಾರಣ ಈ ನಾಲೆಗಳ ಪೈಕಿ ಉತ್ತರ ನಾಲೆ 0 ರಿಂದ 75 ಕಿ.ಮೀ. ವರೆಗೆ ದಿನಾಂಕ 31–5–2000ರಲ್ಲಿ ರೂ. 33.00